International Journal of Kannada Research
www.kannadajournal.com

**ISSN: 2454–5813**
IJKR 2021; 7(1): 89-91
© 2021 IJKR
www.kannadajournal.com
Received: 16-11-2020
Accepted: 18-12-2020

**ಡಾ. ಎ. ಎಲ್. ದೇಸಾಯಿ**
ಸಹಾಯಕ ತಬಲಾ ಉಪನ್ಯಾಸಕರು,
ಕವಿವಿ ಲಲಿತ ಕಲಾ ಹಾಗೂ,
ಸಂಗೀತ ಮಹಾವಿದ್ಯಾಲಯ,
ಧಾರವಾಡ

**Corresponding Author:**
**ಡಾ. ಎ. ಎಲ್. ದೇಸಾಯಿ**
ಸಹಾಯಕ ತಬಲಾ ಉಪನ್ಯಾಸಕರು,
ಕವಿವಿ ಲಲಿತ ಕಲಾ ಹಾಗೂ,
ಸಂಗೀತ ಮಹಾವಿದ್ಯಾಲಯ,
ಧಾರವಾಡ

# ಹೊಸತನಕ್ಕೆ ಕಲಾವಿದನ ಮನೋ ವೈಜ್ಞಾನಿಕ ಕಾರಣಗಳು

**ಡಾ. ಎ. ಎಲ್. ದೇಸಾಯಿ**

ಭೂಮಿಯ ಮೇಲೆ ಹಲವಾರು ಮಹಾನ್ ಮಹಾನ್ ಸಂಸ್ಕೃತಿಗಳು ಜನ್ಮತಾಳಿವೆ, ಹರಪ್ಪಾ ಮಹಂಜೋದಾರ ಸಂಸ್ಕೃತಿ, ನೈಲ್ ನದಿಯ ಸಂಸ್ಕೃತಿ, ಇಂಕಾ ಸಂಸ್ಕೃತಿ ಹೀಗೆ ಪ್ರಸ್ತುತ ವಿಜ್ಞಾನ ಯುಗದಲ್ಲಿ ಆಗಿನ ಜ್ಞಾನದ ಮಟ್ಟವನ್ನು ಅರಿತು ಅವುಗಳ ಅದ್ಭುತ ರಹಸ್ಯಗಳ ಮರ್ಮವನ್ನು ಬೇಧಿಸಲಾಗಿದೆ. ಆಗಿನಿಂದ ಈಗಿನವರೆಗೆ ಒಂದಿಲ್ಲ ಒಂದು ರೀತಿಯಲ್ಲಿ ಹಲವಾರು ವಿಷಯಗಳ ಬಗ್ಗೆ ಮನುಷ್ಯ ತನ್ನ ಶೋಧಕ ಪ್ರವೃತ್ತಿಯನ್ನು ಮುಂದುವರಿಸಿಕೊಂಡು ಬಂದಿದ್ದಾನೆ. ಇಂತಹ ಅಸೀಮ ಸಾಹಸಕ್ಕೆ ಆತನಲ್ಲಿ ಸುಪ್ತವಾಗಿರುವ ನೈಸರ್ಗಿಕ ಶಕ್ತಿಗಳಾದ ಬುದ್ಧಿ ಹಾಗೂ ಮನಸ್ಸುಗಳೇ ಕಾರಣ.

ಮನುಷ್ಯಕುಲದ ಪ್ರಾರಂಭದಿಂದಲೇ ಪ್ರಕೃತಿಯೊಂದಿಗಿನ ಸಾಮರಸ್ಯ ಹಾಗೂ ಅಲ್ಲಿರುವ ಅನಂತ ರಹಸ್ಯಗಳ ಪ್ರಾಪ್ತಿಯ ಸಾಹಸಮಯಗಾಥೆ ಇಂದಿಗೂ ನಡೆದು ಬಂದಿದೆ. ಹೀಗೆ ಅದು ಮುಂದುವರೆಯುವದರಲ್ಲಿ ಸಂಶಯವೂ ಇಲ್ಲ. ಜ್ಞಾನ, ವಿಜ್ಞಾನ, ತಂತ್ರಜ್ಞಾನ, ಕೃಷಿ ವಿಜ್ಞಾನ, ಆಯುರ್ವೇದ ಜ್ಞಾನ ಮತ್ತು ಹಲವಾರು ಲಲಿತ ಕಲೆಗಳಲ್ಲದೆ ಮತ್ತನೇಕ ವಿಷಯಗಳಲ್ಲಿ ಸಂಶೋಧನೆ ನಿರಂತರವಾಗಿ ನಡೆದಿದೆ. ಹಕ್ಕಿಗಳು ಆಕಾಶದ ಅರ್ಥವನ್ನು ತಿಳಿಸಿದರೆ, ಮೀನುಗಳು ಜಲರಾಶಿಯ ಬದುಕಿನ ಒಳಮರ್ಮ ಹೇಳಿವೆ. ಸೂರ್ಯ–ಚಂದ್ರ ಹಾಗೂ ನಕ್ಷತ್ರಗಳು ಮಾನವನ ಗುರುವಾಗಿ ಕೈಹಿಡಿದು ನಡೆಸುತ್ತಿವೆ. ಇವೆಲ್ಲವುಗಳ ಸಂಶೋಧನೆಯ ಮೂಲ ನಮ್ಮ ಬುದ್ಧಿ ಹಾಗೂ ಮನಸ್ಸು ಎಂದು ಜ್ಞಾನಿಗಳು ಸ್ಪಷ್ಟಪಡಿಸಿದ್ದಾರೆ.

ಹೀಗೆ ಹಲವಾರು ರಂಗಗಳಲ್ಲಿ ಈಜುತ್ತ, ತೇಲುತ್ತ, ಹಾರುತ್ತಾ ವಿಷಯಗಳ ಸಂಶೋಧನೆಗಾಗಿ ತನ್ನ ಜೀವನವನ್ನೇ ಮುಡಿಪಿಟ್ಟ ಸಾಕಷ್ಟು ಉದಾಹರಣೆಗಳು ನಮ್ಮಲ್ಲಿವೆ. ಆದರೆ ಸಂಶೋಧನೆ ಎಷ್ಟು ಪ್ರಮುಖವೋ ಅಷ್ಟೇ ಬದಲಾವಣೆಗೆ ಹೊಸತನ, ಪ್ರಗತಿ ಮುಂತಾದವುಗಳು ತುಂಬಾ ಖುಷಿಕೊಡುವ ವಿಷಯಗಳಾಗಿವೆ.

ಇದೊಂದು ನಿರಂತರ ಪ್ರಕ್ರಿಯೆ 'ಯಾವುದೂ ಇಲ್ಲಿ ಶಾಶ್ವತವಲ್ಲ, ದೇವನೊಬ್ಬನ ಹೊರತಾಗಿ' ಎಂದು ಸಂತರೊಬ್ಬರ ಹೇಳಿದ ಮಾತು ನೆನಪಿಸಬಹುದಾಗಿದೆ. 'ಮನಸಿದ್ದರೆ ಮಹಾದೇವ' ಎಂಬ ನಾನ್ನುಡಿಯು ಒಂದು ಉನ್ನತಸ್ಥರದ ಸಂಶೋಧನೆಯಲ್ಲದೆ ಮತ್ತಿನ್ನೇನು? ಅರ್ಥಾತ್ ಪ್ರತಿಯೊಂದರ ಸಂಶೋಧನೆಯ ಮೂಲ ಶಕ್ತಿ ಮನಸ್ಸೇ ಎಂದಂತಾಯಿತು. ಅದು ಅನಂತದ (ಆಧ್ಯಾತ್ಮದ) ಪಯಣಕ್ಕೂ ಬೇಕಾಗುವ ಅನಿವಾರ್ಯವಾದ ಅಸಾಧಾರಣ ಶಕ್ತಿ ಎಂದು ಜ್ಞಾನಿಗಳು ಖಚಿತ ಪಡಿಸಿದ್ದಾರೆ.

ಮನುಷ್ಯ ತನ್ನ ಅವಶ್ಯಕತೆಗಾಗಿ, ವಿಕಾಸಕ್ಕಾಗಿ, ತನ್ನ ಜನ್ಮದ ಪೂರ್ಣತ್ವ ಪಡೆಯುವದರ ಸಲುವಾಗಿ ಹೀಗೆ ಹಲವಾರು ವಿಷಯಗಳನ್ನು ತನ್ನ ಇಚ್ಛಾಶಕ್ತಿಯಿಂದ, ಕುತೂಹಲದಿಂದ ತನ್ನ ಬೇಕುಗಳನ್ನು ಪಡೆಯುವಲ್ಲಿ ಸಹಸ್ರ ಸಹಸ್ರ ವರ್ಷಗಳ ಜನ್ಮ ಜನ್ಮಾಂತರದ, ನಿರಂತರ ತಪಸ್ಸಿನ ಫಲವೇ ಇಂದಿನ ಹೊಸ ಯುಗದಲ್ಲಿ ನಾವು ಕಾಣುವ ಅನೇಕಾನೇಕ ಸಂಶೋಧನೆಗಳು ನಮ್ಮ ಮುಂದಿವೆ. ಈ ಸಂಶೋಧಿತ ಎಲ್ಲವುಗಳನ್ನು ಇಲ್ಲಿ ಉಲ್ಲೇಖಿಸುವುದೆಂದರೆ ಸಮುದ್ರದ ಅಲೆಗಳನ್ನೆಣಿಸಿದಂತಾಗುವುದು.

ಮನುಷ್ಯ ತನ್ನ ಮನದಾನಂದಕ್ಕಾಗಿಯೇ ಕಂಡು ಹಿಡಿದ ಲಲಿತ ಕಲೆಗಳನ್ನೇ ತೆಗೆದುಕೊಳ್ಳೋಣ ಅವುಗಳಲ್ಲಿಯೂ ಎಣಿಕೆಗೆ ಮೀರಿದ ಪ್ರಕಾರಗಳು, ವಿವಿಧತೆಗಳು, ಚಮತ್ಕಾರಗಳು ನಮ್ಮ ಮುಂದಿವೆ. ಈ ಲಲಿತ ಕಲೆಗಳ ಪೈಕಿ ಸಂಗೀತವನ್ನೇ ತೆಗೆದುಕೊಂಡರೆ ಪ್ರಪಂಚದ ಮೂಲೆಮೂಲೆಗಳಲ್ಲಿ ಭಿನ್ನ ಭಿನ್ನ ಪ್ರಕಾರದ ಜಾನಪದ ಸಂಗೀತವನ್ನು ನಾವು ಕಾಣಬಹುದಾಗಿದೆ. ಇನ್ನು ಭಾರತದ ತಪೋಭೂಮಿಯಲ್ಲಿ ಸಂಗೀತಕ್ಕೆ ದೈವತ್ವದ ಸ್ಪರ್ಶ ನೀಡಲಾಗಿದೆ ಎಂದು ಹೇಳಿದರೆ ತಪ್ಪಾಗದು. ಇಲ್ಲಿ ಸಂಶೋಧಿಸಲಾದ ಸಹಸ್ರಾರು ರಾಗಗಳು, ನೂರಾರು ತಾಲಗಳು ಅವುಗಳಿಗೆ ಸಂಬಂಧಿಸಿದ ಹಲವಾರು ಘರಾಣೆಗಳೂ ಪ್ರತಿಯೊಂದು ಬೇರೆ ಬೇರೆ ಅನುಭವ ಹಾಗೂ ಉನ್ನತ ಆನಂದವನ್ನು ನೀಡುವ ಪ್ರಕಾರಗಳಾಗಿವೆ.

ಅವೇ ಮೂಲಾಕ್ಷರಗಳು ಆದರೆ ಸ್ವಾದದ ದರ್ಶನ ಎಲ್ಲವೂ ಅದ್ಭುತ–ಅಗಮ್ಯ, ಇದು ಒಂದೆರಡು ದಿನಗಳಲ್ಲಿ ಮೂಡಿಬಂದದ್ದಲ್ಲಾ, ಅದಕ್ಕೆ ನೂರಾರು ವರ್ಷಗಳ ಶ್ರಮ, ಸಮರ್ಪಣೆ ಹಾಗೂ ರಾತ್ರಿಗಳನ್ನು ಹಗಲುಗಳನ್ನಾಗಿ ಮಾಡಿದ ನಿರಂತರ ತಪಸ್ಸಿನ ಫಲವೇ ಇಂದಿನ ಅಸಾಧಾರಣ ಸಂಗೀತವಾಗಿದೆ. "ಮೇರು ಪರ್ವತದಂತೆ ಗಾಯನ ವಾದನಗಳೊಂದು ಕಡೆ ನಿರಂತರ ಬೆಳೆಯುತ್ತಿದ್ದರೆ, ತಾಲವಾದ್ಯಗಳ ಸಂಶೋಧನೆಯಲ್ಲಿ ವಿಭಿನ್ನ ಪ್ರಕಾರದ ಸಂಶೋಧನೆ ಆ ತಾಲಗಳನ್ನು ಪಾಂಡಿತ್ಯಪೂರ್ಣವಾಗಿ ಘಂಟೆಗಟ್ಟಲೆ ಅವುಗಳ ಬೇರೆ ಬೇರೆ ಅಂಗಗಳನ್ನು ಶಾಸ್ತ್ರ ಬದ್ಧವಾಗಿ ನುಡಿಸುವುದು ಎಲ್ಲವೂ ಅದ್ಭುತ ಅದು ಪಖಾವಾಜದ ಮೇಲಾಗಲಿ, ತಬಲಾದ ಮೇಲಾಗಲಿ (ಉರ್ಧ್ವಮುಖಿ) ಹೀಗೆ ವಿಭಿನ್ನ ಪ್ರಕಾರದ ವಾದ್ಯಗಳ ಮೇಲೆ ತಮ್ಮ ಅಮೂಲ್ಯ ಸಂಗ್ರಹಗಳನ್ನು ಅರ್ಪಿಸಿ ಸಾಧನೆ ಮಾಡಿ ತನಗಾಗಿ ತನ್ನ ಕೇಳುಗರಿಗಾಗಿ ಸಾದರಪಡಿಸುವಾಗ ಹೃದಯದಂತರಾಳದಿಂದ ಮೂಡಿ ಬರುವ ಆನಂದ ವರ್ಣನಾತೀತ ಎನ್ನಬಹುದು, ಹಾಗಾದರೆ ಪ್ರಸ್ತುತ ನಮ್ಮೆದುರಿನಲ್ಲಿರುವ ಈ ಅತ್ಯಮೂಲ್ಯ ಸಂಗೀತ ಮೂಡಿಬಂದದ್ದು, ಬೆಳೆದು ಬಂದದ್ದು, ಕಾಲಕಾಲಕ್ಕೆ ತಕ್ಕಂತೆ ಸೂಕ್ತ ಪರಿವರ್ತನೆ ಮಾಡಿಕೊಂಡಿದ್ದು ಊಹಿಸಲು ಸಾಧ್ಯವಿಲ್ಲ. ಈ ಹುಟ್ಟು, ಬೆಳವಣಿಗೆಯ ಪರಿವರ್ತನೆ ಆಯಾ ಕಾಲಘಟ್ಟದಲ್ಲಿ ಹಲವಾರು ಕಾರಣಗಳಿಂದಾಗುವುದು ಸಹಜವೆ"[1]

ಇದೆಲ್ಲದಕ್ಕೂ ಮನಸ್ಸೇ ಕಾರಣ ಅದು ನಿಸರ್ಗ ಮನುಷ್ಯನಿಗೆ ನೀಡಿರುವ ಅದ್ಭುತ ಶಕ್ತಿ. ಅದು ಎಷ್ಟೊಂದು ಊಹಾತೀತವಾದ ಅದ್ಭುತ ಶಕ್ತಿ ಎಂದರೆ ಕೇವಲ ಕಲ್ಪನೆ ಮಾತ್ರದಿಂದ ಮನಸ್ಸಿನ ಬಗ್ಗೆ ವಿಚಾರಿಸುವುದು ಸರ್ವಥಾ ಆಗದ ಮಾತು ಎಂಬ ವಿಷಯವನ್ನು ಮಹಾನ್ ಆಧ್ಯಾತ್ಮಿಕರು, ಸಾಧಕರು ಹಾಗೂ ಮನೋವಿಜ್ಞಾನಿಗಳು ಖಚಿತಪಡಿಸಿದ್ದಾರೆ. ತಬಲಾದ ಜನಕ ಸಿದ್ದಾರ್ ಖಾನ್ ಬಗ್ಗೆ ತೆಗೆದುಕೊಳ್ಳೋಣ ಆತ ಪಖಾವಾಜನಲ್ಲಿ ಅತ್ಯಂತ ಪ್ರತಿಭಾವಂತ ಕಲಾವಿದನಾಗಿರಬಹುದು, ಆದರೆ ಆತ ತನ್ನ ಜೀವನದಲ್ಲಿ ಎದುರಿಸಿದ ಘಟನೆಯೊಂದು ಆತನನ್ನು ಪಖಾವಾಜ ವಾದ್ಯದಿಂದ ವಿಮುಖನಾಗಲು ಕಾರಣವಾಯಿತೆಂಬುವುದು ಒಂದು ಇತಿಹಾಸ.

ಆಗಿನ ಸಮಯದಲ್ಲಿ ಕಲಾವಿದರ ಮಧ್ಯೆ ಅವರ ಮಹಾನತೆಯನ್ನು ಗುರುತಿಸಲು ಸ್ಪರ್ಧೆಗಳು ಜರುಗುತ್ತಿದ್ದದ್ದು ಹಲವಾರು ಪ್ರಕರಣಗಳಲ್ಲಿ ಕಾಣಬಹುದು. ಅಕ್ಬರನ ಸಮಯದಲ್ಲಿ ಮಿಯಾ ತಾನ್‌ಸೇನ್ ಹಾಗೂ ಬೈಜು ಎಂಬ ಪ್ರಖ್ಯಾತ ಗಾಯಕರ ಮಧ್ಯೆ ಜರುಗಿದ ಪೈಪೋಟಿ ಮತ್ತು "ಸಿದ್ದಾರ್ ಖಾನ್ ಹಾಗೂ ಭವಾನಿದಾಸರ ಮಧ್ಯೆ ಜರುಗಿದ ಇಂತಹದ್ದೇ ಸ್ಪರ್ಧೆಗಳನ್ನು ನಾವು ಉಲ್ಲೇಖಿಸಬಹುದಾಗಿದೆ."[2] ಆಗಿನ ಸಮಯದಲ್ಲಿ ಇಂತಹ ಆಯೋಜನೆಗಳು ಸಹಜವಾಗಿಯೇ ನಡೆಯುತ್ತಿದ್ದವೆನ್ನಬಹುದು. ಅದು ಅವರವರ ಪ್ರತಿಭೆಯ ಹಾಗೂ ಸಾಧನೆಗಳನ್ನು ಒರೆಗೆ ಹಚ್ಚಿ ಹಿರಿಮೆಯನ್ನು ಸ್ಥಾಪಿಸುವ ಪ್ರಸಂಗಗಳಾಗಿದ್ದವು ಅಂತೆಯೇ ಪಂ. ಭವಾನಿದಾಸರು ಹಾಗೂ ಉ. ಸಿದ್ದಾರ್ ಖಾನ್‌ರ ನಡುವೆ ಇಂತಹದೊಂದು ನಿರ್ಣಾಯಕ ಸ್ಪರ್ಧೆ ಜರುಗಿದ್ದು ಕಂಡುಬರುತ್ತದೆ. ಅದರಲ್ಲಿ ಉ. ಸಿದ್ದಾರ್ ಖಾನ್ ಸೋಲನ್ನನುಭವಿಸುತ್ತಾನೆ, ಅಲ್ಲಿಗೆ ಆತನ ಪಖಾವಾಜ್ ನಿಶಬ್ದವಾಗಿರಬಹುದು. ಆಕ್ರೋಶಿತ ಮನಸ್ಸು ತೆಗೆದುಕೊಂಡ ನಿರ್ಧಾರ ಪಖಾವಾಜನ ಇಬ್ಭಾಗವಾಗಿರಬಹುದು. ಆದರೆ ಸಿದ್ದಾರ್ ಖಾನ್‌ನಂತಹ ಅನುಪಮ ಕಲಾವಿದ ಅಲ್ಲಿಗೆ ತನ್ನ ಕಲೆಯ ಅಂತ್ಯಗೊಳಿಸದೆ ಆ ಇಬ್ಭಾಗಿಸಲ್ಪಟ್ಟ ಪಖಾವಾಜನ ತುಂಡುಗಳನ್ನಾಧರಿಸಿ ಹೊಸ ವಾದ್ಯವನ್ನು ಸೃಷ್ಟಿಸಿದ ಮತ್ತು ಅದನ್ನೆ ತನ್ನ ಭವಿಷ್ಯದ ಆಧಾರವಾಗಿಸಿಕೊಂಡು ಒಂದು ವಾದ್ಯ ಹಾಗೂ ಘರಾಣೆಯ ಜನಕನಾಗಿದ್ದು ಒಂದು ರೋಮಾಂಚನಕಾರಿ ವಿಷಯ. ಹೀಗೆ ಹಲವಾರು ಘಟನೆಗಳು ಕೂಡ ನಮ್ಮನ್ನು ನಾವೇ ಪರಿವರ್ತಿಸಿಕೊಳ್ಳಲು ಕಾರಣವಾಗುತ್ತದೆ ಇವೆಲ್ಲದ್ದಕ್ಕೆ ಮನಸ್ಸೇ ಕಾರಣವೆನ್ನಬಹುದು.

ಏಕತಾನತೆ ಅಥವಾ ಅತೃಪ್ತಿ, ಬದಲಾವಣೆಗೆ ಕಾರಣಗಳು ಆಗಬಹುದು. ವಿದ್ಯಾರ್ಥಿ ತಮ್ಮ ಗುರುಗಳಿಂದ ಅವರ ಘರಾಣೆಯ ಸಮಗ್ರ ವಿಷಯಗಳು ಅಮೂಲಾಗ್ರವಾಗಿ ಸ್ವೀಕರಿಸಿ ಅವೆಲ್ಲವುಗಳನ್ನು ಶ್ರಮವಹಿಸಿ ಸಾಧಿಸಿಕೊಂಡಾಗ್ಯೂ ಏನೋ ಒಂದು ಕೊರಗು ಆಂತರಿಕವಾಗಿ ಕಾಡುತ್ತಿರುತ್ತದೆ. ಬೇರೆ ಬೇರೆ ಪ್ರಸಿದ್ಧ ಕಲಾವಿದರ ಸಂಗ್ರಹ ಹಾಗೂ ಪ್ರಸ್ತುತಿಯನ್ನು ಕಂಡು ಇವು ತನ್ನಲ್ಲಿಲ್ಲವಲ್ಲ ಎಂಬ ನಿರಂತರ ಕೊರಗು ಹಾಗೂ ಚಿಂತನೆಗಳು ಸಾಧಕನನ್ನು ತೀವ್ರವಾಗಿ ಕಾಡಿಸಲಾರಂಭಿಸುತ್ತದೆ. ಹೀಗಾಗಿ ಆತನ ಅತೃಪ್ತ ಮನಸ್ಸು ಆತನಲ್ಲಿ (ತಲ್ಲಣ ಹುಟ್ಟಿಸಲು) ತನ್ನ ಬಗ್ಗೆ ಅಸಮಾಧಾನ ಹುಟ್ಟಿಸುತ್ತದೆ, ಆತನನ್ನು ಏನಾದರೊಂದು ಹೊಸತನವನ್ನು ಸೃಷ್ಟಿಸಲು ಪ್ರಚೋದಿಸುತ್ತದೆ. ತನ್ನ ಘರಾಣೆಗಳ ಸಂಗ್ರಹಗಳು ಅಮೂಲ್ಯವಾಗಿದ್ದರೂ ಆತನ ಮನಸ್ಸು ಮತ್ತೇನನ್ನೋ ಸ್ವೀಕರಿಸಲು ಅಥವಾ ಸೃಷ್ಟಿಸಲು ತುಡಿಯುತ್ತಿರುತ್ತದೆ. ಇದು ಸಹಜ ಪ್ರವೃತ್ತಿ. ಹೀಗಾಗದಿದ್ದಲ್ಲಿ ಕಲೆ ನಿಂತ ನೀರಾಗಿಬಿಡುತ್ತಿತ್ತು. ಪುನಃ ಪುನಃ ಅವೇ ಅವೇ ಸಂಗ್ರಹಗಳ ಮೇಲೆ ವ್ಯವಹರಿಸುವುದೆಂದರೆ ಆಂತರಿಕವಾಗಿ ಒಪ್ಪದ ಮಾತಾಗಿಬಿಡುತ್ತದೆ. ಈ ತೆರನಾದ ಮಾನಸಿಕ ಸಂಘರ್ಷವೇ ಹೊಸತೊಂದರ ಜನನಕ್ಕೆ ಕಾರಣವಾಗುತ್ತದೆ. ಇಂತಹ ಕಾರಣಗಳೇ ಸಹಸ್ರಾರು ವರ್ಷಗಳಿಂದ ಸಂಗೀತ ಕಲೆಯು ಜೀವಂತವಾಗಿರಲು ಮತ್ತು ಬೆಳೆಯುತ್ತ ಹಾಗೂ ಬದಲಾವಣೆಗಳನ್ನು ಸ್ವೀಕರಿಸುತ್ತಾ ಅದು ತನ್ನ ವ್ಯಾಪ್ತಿಯನ್ನು ಹಿರಿದುಗೊಳಿಸುತ್ತಾ ಬಂದಿದೆ. ಹೀಗಾಗಿಯೇ ಕಲೆ ಚಿರನೂತನವಾಗಿ ಇಂದಿಗೂ ಮತ್ತು ಮುಂದೆಯೂ ತನ್ನ ಸಾಮ್ರಾಜ್ಯವನ್ನು ಉದ್ದಗಲಿಸುತ್ತಾ ಮನುಷ್ಯನ ಹೃದಯದಲ್ಲಿ ಚಿರಸ್ಥಾಯಿಯಾಗಲು ಕಾರಣವಾಗುವುದರಲ್ಲಿ ಯಾವ ಸಂಶಯವಿಲ್ಲ.

ಹೇಗೆ ಸಮಯ ಮುಂದುವರೆಯುತ್ತದೆಯೋ, ಪ್ರಕೃತಿಯಲ್ಲಿ ಬಲಾವಣೆಗಳು ಹಾಗೂ ಹೊಸತನ ಸಹಜವಾಗಿಯೇ ಪ್ರಕಟವಾಗುತ್ತವೆ ಇದರಲ್ಲಿ ಸಾಮಾಜಿಕ ಪರಿವರ್ತನೆಯು ಒಂದು. ಹೊಸ ಅಲೆಗಳ, ಹೊಸ ಜನಾಂಗದ ವಿಚಾರಗಳು ಆಯಾ ಕಾಲದ ಮೂಲ ನಂಬುಗೆಗಳಾಗಿಬಿಡುತ್ತವೆ. ಈ ತೆರನಾದ ಬದಲಾವಣೆ ಹಾಗೂ ಪ್ರಗತಿ ಸಹಜವಾಗಿಯೇ ಕಾಲ ಕಾಲಾಂತರದಿಂದ ನಡೆದು ಬಂದಿದೆ. ಯಾವುದು ಇಲ್ಲಿ ಸ್ಥಾಯಿಯಲ್ಲ ಅದು ನಿರಂತರ ಬದಲಾವಣೆಯನ್ನು ಮಾಡುತ್ತಾ ನಿಸರ್ಗ ತನ್ನ ಹಿರಿಮೆಯನ್ನು ತೋರುತ್ತಾ ಬಂದಿದೆ.

ಬೇಡಿಕೆಗಳಿಗನುಗುಣವಾಗಿ ಬದಲಾವಣೆ ಮತ್ತು ಹೊಸತನ ಬರುತ್ತಲೇ ಇರುತ್ತದೆ. ಸಂಗೀತದಲ್ಲಿ ಧ್ವನಿವರ್ಧಕಗಳಿಲ್ಲದ ಸಮಯದಲ್ಲಿ ಅದರ ಜೋರ್ದಾರ್‌ಪನ್ ಈಗಿಲ್ಲದಿರಬಹುದು ಆದರೆ ನಮಗಿಂದು ಲಭ್ಯವಿರುವ ಉತ್ತಮ ಧ್ವನಿವರ್ಧಕಗಳು ನಮ್ಮ ಕಲೆಯನ್ನು ಅದಕ್ಕೆ ತಕ್ಕಂತೆ ರೂಪಿಸಿಕೊಳ್ಳಲು ಸಾಧ್ಯವಾಗಿದೆ ಇದು ಸಹಜವೂ ಅಹುದು. ಇಂತಹ ಅನುಕೂಲತೆಯನ್ನು ಪಡೆದ ಕಲಾವಿದ ತನ್ನ ಧ್ವನಿಯ ಮಾಧುರ್ಯ, ಸೂಕ್ಷ್ಮತೆ ಮತ್ತು ವಿಸ್ತಾರ ಮುಂತಾದವುಗಳನ್ನು ಬೆಳಸಿಕೊಂಡು ಹಿಂದಿನ ಜೋರ್ದಾರ್‌ಪನ್‌ಗೆ ಅಂಟಿಕೊಳ್ಳದೆ ತನ್ನ ಭಾವನೆಗಳನ್ನು ವ್ಯಕ್ತಪಡಿಸಲು ಅವಶ್ಯಕ ಶಕ್ತಿಯನ್ನು ನೀಡಿ ಆನಂದದ ವಲಯವನ್ನು ಸೃಷ್ಟಿಸಲು ಸಾಧ್ಯವಾಗಿದೆ.

ಇಂತಹ ಬದಲಾವಣೆಗಳಾದದ್ದು ಸ್ಪಷ್ಟವಾಗಿ ಕಂಡುಬರುತ್ತದೆ ಇದು ಸಾಮಾನ್ಯವಾಗಿ ಎಲ್ಲಾ ರಂಗಗಳ ಪರಿವರ್ತನೆ ಹಾಗೂ ವಿಕಾಸಕ್ಕೆ ಅನುವು ಮಾಡಿಕೊಟ್ಟಿದೆ. ಇಂತಹ ಪ್ರಕ್ರಿಯೆ ಆಗಲೇ ಬೇಕಾದದ್ದು ಒಳಿತೆ. ಇಲ್ಲದಿದ್ದರೆ ಅದು ಹೊಸತನದಿಂದ ವಂಚಿತವಾಗಿ ಕೊನೆಗೆ ಜನತೆಯ ಸ್ಮರಣೆಯಿಂದ ಮಾಯವಾಗುವುದರಲ್ಲಿ ಯಾವ

ಸಂಶಯವೂ ಇಲ್ಲ. ಪ್ರಸ್ತುತ ತಬಲಾ ವಾದನದ ಬದಲಾವಣೆಗಳಿಗೆ ಈ ಮೇಲಿನ ಎಲ್ಲಾ ವಿಚಾರಗಳು ಕಾರಣವಾಗುತ್ತವೆ. ಅದರಲ್ಲಿ ಕಲಾವಿದನ ಮನೋ ವೈಜ್ಞಾನಿಕ ಕಾರಣವೂ ಒಂದು.

**ಅಡಿ ಟಿಪ್ಪಣಿಗಳು**

1. ಪಂ. ವಾಯ್. ಆರ್. ಮುಲಿಮನಿಯವರ – ಸಂದರ್ಶನ
2. ಡಾ. ಅಬನ ಎ. ಮಿಸ್ತ್ರೀ – ಪಖಾವಾಜ ಔರ್ ತಬಲಾ ಕೆ ಘರಾಣೆ ಎವಮ್ ಪರಂಪರಾಯೆ – ಪು, 160.